# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 595 |
| ಸದಸ್ಯರ ಹೆಸರು | : | ಶ್ರೀ. ಪ್ರತಾಪ್ ಸಿಂಹನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.07.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ರಾಜ್ಯದ "ಅನ್ನಭಾಗ್ಯ ಯೋಜನೆ" ಯ ಹಣ ಕಳೆದ ಮೂರು ತಿಂಗಳಿನಿಂದ ಫಲಾನುಭವಿಗಳ ಖಾತೆಗೆ ಜಮೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅನ್ನಭಾಗ್ಯ DBT ಯೋಜನೆಗೆ ಸಂಬಂಧಿಸಿದಂತೆ ಮೇ – 2024 ರ ಮಾಹೆಯವರೆವಿಗೂ ಅರ್ಹ ಫಲಾನುಭವಿಗಳ ಖಾತೆಗೆ ಹಣವನ್ನು ಪಾವತಿಸಲಾಗಿರುತ್ತದೆ. ಹಾಗೂ ಜೂನ್ 2024 ರ ಮಾಹೆಯ DBT ಹಣ ವರ್ಗಾವಣೆ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ. | ಬಂದಿದ್ದಲ್ಲಿ, "ಅನ್ನಭಾಗ್ಯ ಯೋಜನೆ" ಯ ಅನುಷ್ಠಾನಕ್ಕೆ ಪದೇಪದೇ ತಾಂತ್ರಿಕ ಅಂಶಗಳು ಅಡ್ಡಿಯಾಗುತ್ತಿರುವುದಕ್ಕೆ ಕಾರಣಗಳೇನು; | K2 ಮತ್ತು DBT ತಂತ್ರಾಂಶದಲ್ಲಿ ಕೆಲವು ಬದಲಾವಣೆಗಳನ್ನು ತಂದ ಹಿನ್ನೆಲೆಯಲ್ಲಿ ಏಪ್ರಿಲ್ 2024 ರ ಮಾಹೆಯ DBT ಹಣ ವರ್ಗಾವಣೆ ಕಾರ್ಯ ಸ್ವಲ್ಪ ವಿಳಂಬವಾಗಿರುತ್ತದೆ. ತದನಂತರ DBT ಹಣ ವರ್ಗಾವಣೆ ಕಾರ್ಯದಲ್ಲಿ ಅಡ್ಡಿಯಾಗಿರುವುದಿಲ್ಲ. |
| ಇ. | ಇದುವರೆಗೆ "ಅನ್ನಭಾಗ್ಯ ಯೋಜನೆ" ಯ ಎಷ್ಟು ತಿಂಗಳ ಹಣ ಫಲಾನುಭವಿಗಳ ಖಾತೆಗೆ ಜಮೆ ಮಾಡಲು ಬಾಕಿ ಉಳಿದಿದೆ; | ಯಾವುದು ಇರುವುದಿಲ್ಲ. |
| ಈ. | ಫಲಾನುಭವಿಗಳ ಖಾತೆಗೆ ಹಣಜಮೆ ಮಾಡಲು ದೀರ್ಘಕಾಲದ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಇದುವರೆಗೆ ಸೂಕ್ತ ಕ್ರಮವಹಿಸದೇ ಇರಲು ಕಾರಣಗಳೇನು; | ಅನ್ವಯಿಸುವುದಿಲ್ಲ. |
| ಉ. | ಅನಗತ್ಯ ಹಾಗೂ ಕಾರಣವಾದ ವಿಳಂಬದಿಂದಾಗಿ, ಸಕಾಲದಲ್ಲಿ ಯೋಜನೆಯ ಲಾಭ ಪಡೆಯುವುದರಿಂದ ಫಲಾನುಭವಿಗಳು ವಂಚಿತರಾಗುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರ ಏನು ಕ್ರಮವಹಿಸಲಿದೆ ಹಾಗೂ ಯಾವ ಕಾಲ ಮಿತಿಯೊಳಗೆ ಬಾಕಿ ಇರುವ ಪೂರ್ಣ ಮೊತ್ತವನ್ನು ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುವುದು? | ಅನ್ವಯಿಸುವುದಿಲ್ಲ. |

ಆನಾಸ 92 ಎಫ್‌ಪಿಪಿ 2024

**(ಕೆ.ಹೆಚ್. ಮುನಿಯಪ್ಪ)**

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ, ಸಚಿವರು.